೨)		ಕೋಟಿ ರೂ.ಗಳಲ್ಲಿ
1)	1993-94ನೇ ಸಾಲಿನಲ್ಲಿ ಅನುಭವಿಸಿದ ನಷ್ಟ	0.48
2)	1994-95ನೇ ಸಾಲಿನಲ್ಲಿ ಅನುಭವಿಸಿದ ನಷ್ಟ	9.21
3)	ಒಟ್ಟಾರೆ ನಷ್ಟ	9.69

೩)

೧) ತಾಂತ್ರಿಕತೆ ಉನ್ನತೀಕರಣಗೊಳಿಸಲು ಸಾಕಷ್ಟು ಬಂಡವಾಳ ಹೂಡದಿರುವುದು.

೨) ರೇಡಿಯಲ್ ಟೈರ್ ಘಟಕವನ್ನು ಹೆಚ್ಚು ಮಾರುಕಟ್ಟೆ ಇಲ್ಲದ ಕಾರಣ ಸಾಮರ್ಥ್ಯಕ್ಕೆ ತಕ್ಕಂತೆ ಉಪಯೋಗಿಸಿಕೊಳ್ಳದೇ ಇರುವುದು.

೩) ತಾಂತ್ರಿಕತೆ ಒದಗಿಸುತ್ತಿರುವವರಿಂದ ಸಾಕಷ್ಟು ತಾಂತ್ರಿಕತೆ ಒದಗದಿರುವುದು.

೪) ಟೈರ್ ಉದ್ಯಮದಲ್ಲಿ ಹೆಚ್ಚುತ್ತಿರುವ ಪೈಪೋಟಿ.

೪) ಹೌದು, ವಿಕ್ರಾಂತ್ ಟೈರ್ಸ್ ನಿಯಮಿತದ ಪುನರ್ ಸಜ್ಜೀಕರಣದ ನಿಟ್ಟಿನಲ್ಲಿ ಸೂಕ್ತ ಪ್ರಸ್ತಾವನೆ ಯನ್ನು ತಯಾರಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಕೆಎಸ್ ಐಐಡಿಸಿ(ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಹೂಡಿಕೆ ಅಭಿವೃದ್ಧಿ ನಿಗಮ) ಯನ್ನು ನೋಡಲ್ ಎಜನ್ಸಿಯಾಗಿ ನೇಮಿಸಲಾಗಿದೆ.

೫) ವಿಕ್ರಾಂತ್ ಟೈರ್ಸ್ ನಿಯಮಿತವನ್ನು ಪುನರ್ ಸಜ್ಜೀಕರಣಗೊಳಿಸವ ದಿಸೆಯಲ್ಲಿ ನೋಡಲ್ ಎಜನ್ಸಿಯಾದ ಕೆಎಸ್ ಐಐಡಿಸಿಯು ಮಾಡುವ ಶಿಫಾರಸ್ಸುಗಳನ್ನು ಪರಿಶೀಲಿಸಿ ಸರ್ಕಾರಕ್ಕೆ ಸೂಕ್ತ ಶಿಫಾರಸ್ಸು ಮಾಡಲು ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಪದೀಯ ಸಮಿತಿಯನ್ನು ರಚಿಸಲಾಗಿದೆ.

ರಾಜ್ಯದಲ್ಲಿರುವ ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆಗಳು.

800-ಶ್ರೀ ರಾಮಲಿಂಗರೆಡ್ಡಿ (ಜಯನಗರ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಅಂಗನವಾಡಿ ಕಾರ್ಯಕರ್ತೆಯರ ಸಂಖ್ಯೆ ಎಷ್ಟು

ಆ) ರಾಜ್ಯಗಳಲ್ಲಿರುವ ಅಂಗನವಾಡಿ ಕಾರ್ಯಕರ್ತೆಯರು ತಮ್ಮ ಬೇಡಿಕೆ ಪಟ್ಟಿಯನ್ನು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಅವರು ಖಾಸಗೀಕರಣವನ್ನು ವಿರೋಧಿಸಿದ್ದಾರೆಯೇ?

ಈ) ಅವರ ಬೇಡಿಕೆ ಬಗ್ಗೆ ಕೈಗೊಳ್ಳಲು ಉದ್ದೇಶಿಸಲಾಗಿರುವ ಕ್ರಮಗಳೇನು?

ಶ್ರೀಮತಿ ಬಿ.ಟಿ. ಲಲಿತಾನಾಯಕ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):

ಅ) ಇಲ್ಲ

ಆ) ಹೌದು.

ಇ) "ಖಾಸಗೀಕರಣ" ಎಂದು ಅವರು ವಾಖ್ಯಾನಿಸಿಕೊಂಡಿರುವುದನ್ನು ವಿರೋಧಿಸಿದ್ದಾರೆ.

ಈ) ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ರೇಷ್ಮೆ ಹುಳಗಳ ಖಾಯಿಲೆಗೆ ಔಷಧಿ.

509-ಶ್ರೀ ರವಿಕಾಂತ್ ಎಸ್. ಪಾಟೀಲ್ (ಇಂಡಿ) ಮಾನ್ಯ ರೇಷ್ಮೆ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಂಡಿ ಹಾಗೂ ಸಿಂದಗಿ ಕ್ಷೇತ್ರಗಳಲ್ಲಿ ರೇಷ್ಮೆ ಹುಳುಗಳಿಗೆ ಕಾಯಿಲೆ ಬಂದು ಸಾಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ರೈತರಿಗೆ ಉಚಿತವಾಗಿ ಔಷಧಿಗಳನ್ನು ನೀಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಡಿ. ನಾಗರಾಜಯ್ಯ (ರೇಷ್ಮೆ ರಾಜ್ಯ ಸಚಿವರು).

ಅ) ಇಲ್ಲ.

ಆ) ರೋಗ ಉಲ್ಬಣಗೊಂಡಲ್ಲಿ ಪ್ರತಿ ಬೆಳೆಯ ನಂತರ ಉಚಿತವಾಗಿ ಇಲಾಖಾ ವತಿಯಿಂದ ಎಲ್ಲಾ ರೈತರ ಮನೆ ಮತ್ತು ಸಲಕರಣೆಗಳನ್ನು ಸೋಂಕು ನಿವಾರಣೆಗೆ ನಿಗಧಿ ಪಡಿಸಲಾಗುತ್ತದೆ.

ಬಂಟ್ವಾಳ ನಗರದ ನೀರು ಸರಬರಾಜು

೬೧೦-ಶ್ರೀ ಬಿ. ರಮಾನಾಥರೈ (ಬಂಟ್ವಾಳ) ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಂಟವಾಳ ನಗರ ನೀರು ಸರಬರಾಜು ಯೋಜನೆಯಡಿ ಪ್ರಾರಂಭವಾಗಿರುವ ಕಾಮಗಾರಿ ಪ್ರಗತಿ ಯಾವ ಹಂತದಲ್ಲಿ ಇದೆ?

ಆ) ಇಲ್ಲಿಯವರೆಗೆ ವಿನಿಯೋಗಿಸಲಾಗಿದ ಹಣವೆಷ್ಟು?

ಇ) ಈ ಕಾಮಗಾರಿ ಯಾವಾಗ ಪೂರ್ಣಗೊಳಿಸಲಾಗುವುದು.

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು):

ಅ) ಈ ಯೋಜನೆಯಡಿಯಲ್ಲಿ ಪ್ರಾರಂಭವಾಗಿರುವ ಕಾಮಗಾರಿ ಪ್ರಗತಿಯ ಹಂತ ಈ ರೀತಿ ಇದೆ.